ಒ ಎಸ್ ನಂ.290/2012
ಡಿ.ಡಬ್ಲ್ಯೂಃ 6 ಹಾಜರು

ದಿನಾಂಕಃ 23-02-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಖ್ಯ ವಿಚಾರಣೆ ಶ್ರೀಯುತ ಎನ್ ಎಸ್ ಜಿ ವಕೀಲರಿಂದಃ

ಈ ದಿನ ನಾನು ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ನೀಡಿದ್ದು ಅದರಲ್ಲಿ ಹೇಳಿರುವ ಅಂಶಗಳೆಲ್ಲವು ಸರಿಯಿದ್ದು ಅದನ್ನು ನಾನೇ ಹೇಳಿ ಬರೆಸಿದ್ದು ಅದಕ್ಕೆ ನನ್ನ ಸಹಿ ಕೂಡಾ ಇರುತ್ತದೆ. ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಮಾಡಿದ್ದೇನೆ.

ನಿಡಿ-127 ಮೊದಲನೆ ಪ್ರತಿವಾದಿ 11 ನೇ ಪ್ರತಿವಾದಿಗೆ ದಿಃ 07-12-2010 ರಂದು ಬರೆದುಕೊಟ್ಟ ನೊಂದಾಯಿತ ಬಕ್ಸಿಸು ಪತ್ರದ ಅಸಲು ಪ್ರತಿ ಅದಕ್ಕೆ ನಾನು ಮೊದಲನ ಸಾಕ್ಷಿದಾರನಾಗಿ ಸಹಿ ಮಾಡಿದ್ದು ನನ್ನ ಸಹಿಯನ್ನು ನೋಡಿ ಗುರುತಿಸುತಿದ್ದೇನೆ ನನ್ನ ಸಹಿಯನ್ನು ನಿಡಿ-127(ಎ) ಎಂದು ಗುರುತಿಸಲಾಯಿತು. ಅದರಲ್ಲಿ ಕಂಡು ಬರುವ ಮೊದಲನೆ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಡಿ-127(ಬಿ) ಹಾಗೂ 11 ನೇ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಸುತ್ತಿದ್ದ ಅದನ್ನು ನಿಡಿ-127(ಸಿ) ಎಂದು ಗುರುತಿಸಲಾಯಿತು. ಇನ್ನೊಬ್ಬ ಸಾಕ್ಷಿದಾರರಾದ ಮಸ್ತನಾ ಜಮಾದರ ರವರ ಸಹಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಡಿ-127(ಡಿ) ಎಂದು ಗುರುತಿಸಲಾಯಿತು. ನೊಂದಾವಣಾಧಿಕಾರಿಗಳ ಕಚೇರಿಯಲ್ಲಿ ನಾನು ನಿಡಿ-127 ಕ್ಕೆ ಸಹಿ ಮಾಡಿದ್ದು ಅದನ್ನು ನೋಡಿ ಗುರುತಿಸುತ್ತಿದ್ದೇನೆ ಅದನ್ನು ನಿಡಿ-127(ಇ) ಎಂದು ಗುರುತಿಸಲಾಯಿತು.

ವಾದಿಯ ಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಸತೀಶ ಜೆ.ಬಾಳಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ